# 17-11-2023

ಸುವರ್ಣ ಕರ್ನಾಟಕ ಸಂಭ್ರಮ – ಕನ್ನಡ ರಾಜ್ಯೋತ್ಸವದ ಪ್ರಯುಕ್ತ
ಕನ್ನಡ ವಿಭಾಗ ಹಾಗೂ ಐ.ಕ್ಯೂ.ಎ.ಸಿ ವತಿಯಿಂದ

ವಿಶೇಷ ಉಪನ್ಯಾಸ ಮಾಲೆ : 2023-24



## "ನಾಡು-ನುಡಿ ಚಿಂತನೆ"

ಮುಖ್ಯ ಅತಿಥಿಗಳು
**ಡಾ. ಸಿ. ಎಸ್. ಕೆಂಡಗಣ್ಣೇಗೌಡ**
ಸಹ ಪ್ರಾಧ್ಯಾಪಕರು ಹಾಗೂ
ಮುಖ್ಯಸ್ಥರು, ಕನ್ನಡ ವಿಭಾಗ
ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು

ಕನ್ನಡ ಬೆಳೆಸಿ
ಕನ್ನಡ ಉಳಿಸಿ
ಸಿರಿಗನ್ನಡಂ ಗೆಲ್ಗೆ
ಸಿರಿಗನ್ನಡಂ ಬಾಳ್ಗೆ

ದಿನಾಂಕ: 17.11.2023ನೇ ಶುಕ್ರವಾರ | ಸಮಯ: ಬೆಳಿಗ್ಗೆ 10.30 ಗಂಟೆಗೆ
ಸ್ಥಳ : ಶ್ರೀ.ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣ




“ನಾಡು-ನುಡಿ ಚಿಂತನೆ”














ವಿದ್ಯಾವರ್ಧಕ ಸಂಘ (ರಿ), ಮೈಸೂರು
ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು
ಶೇಷಾದ್ರಿ ಅಯ್ಯರ್ ರಸ್ತೆ, ಮೈಸೂರು – 570 001
ಕನ್ನಡ ಬೆಳೆಸಿ
ಕನ್ನಡ ಉಳಿಸಿ











ದಿನಾಂಕ:೧೭-೧೧-೨೦೨೩ರಂದು ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ವಿಭಾಗದ ವತಿಯಿಂದ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ಮಹಾರಾಣಿ ಕಾಲೇಜಿನ ಸಹಾ ಪ್ರಾಧ್ಯಾಪಕರು ಕನ್ನಡ ವಿಭಾಗದ ಮುಖ್ಯಸ್ಥರು ಆದ ಡಾ.ಸಿ.ಎಸ್.ಕೆಂಡಗಣ್ಣೇಗೌಡ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ **‘ಕನ್ನಡ ನಾಡು ನುಡಿ ಚಿಂತನೆ’** ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸವನ್ನು ನೀಡಿದರು. ಕನ್ನಡವು ಭಾರತದ ಸುಂದರ ಬಾಷೆಗಳಲ್ಲಿ ಒಂದು. ಕನ್ನಡ ಕೇವಲ ಭಾಷೆಯಲ್ಲ ಅದು ಬದುಕು ಕನ್ನಡ ಭಾಷೆಯನ್ನು ವಿಶ್ವ ಪ್ರಜ್ಞೆಯನ್ನಾಗಿ ಮಾಡಬೇಕು. ಕನ್ನಡ ಭಾಷೆಯು ಅಮೃತಕ್ಕೂ ಮಿಗಿಲಾದ ಭಾಷೆಯಾಗಿದೆ. ಈ ಭಾಷೆಯನ್ನು ಕಲಿಯುವುದು ಬಹಳ ಸುಲಭ ಇತರರಿಗೆ ಈ ಭಾಷೆಯನ್ನು ಅತ್ಯಂತ ಸರಳವಾಗಿ ಕಲಿಸಬಹುದು. ಕರ್ನಾಟಕದಲ್ಲಿರುವ ಪ್ರತಿಯೊಬ್ಬರು ಈ ಭಾಷೆಗೆ ಗೌರವನ್ನು ಕೊಡಲೇಬೇಕು. ಕನ್ನಡ ನಾಡನ್ನು ಕಮ್ಮಿತ್ತು ನಾಡು ಎಂದು ಕರೆದಿದ್ದಾರೆ. ಅಂದರೆ ಶ್ರೀಗಂಧದ ಕಂಪನ್ನು ಈ ನಾಡಿನಲ್ಲಿ ಕಾಣಬಹುದು. ಕರುನಾಡು ಎಂದರೆ ಎತ್ತರವಾದ ಪ್ರದೇಶ ಎಂದು ಸಹ ಕರೆಯುತ್ತಾರೆ.೧೯೭೩ರಲ್ಲಿ ಮೈಸೂರು ರಾಜ್ಯ ಕರ್ನಾಟಕ ಎಂದು ಹೆಸರು ಪಡೆಯಲು ಅಂದಿನ ಮುಖ್ಯಮಂತ್ರಿಗಳಾದ ಡಿ.ದೇವರಾಜ ಅರಸು ಮತ್ತು ಸ್ಪೀಕರ್ ಆಗಿದ್ದ ಗುಂಡ್ಲುಪೇಟೆ ಕೆ.ಎಸ್.ನಾಗರತ್ನಮ್ಮ ಅವರು ಪ್ರಮುಖ ಕಾರಣಕರ್ತರು ಇದರ ಹಿನ್ನಲೆಯಾಗಿ ಹಲವು ಕವಿಗಳು ಸಾಹಿತಿಗಳು ಹೋರಟಗಾರರು ಕಾರಣರಾಗಿದ್ದಾರೆ. ಇಂದು ನಾವು ಭಾಷೆಯನ್ನು ಬಳಸದಿದ್ದರೆ ಭಾಷೆಯು ಉಳಿಯುವುದಿಲ್ಲ ಆದರೆ ಕನ್ನಡ ಭಾಷೆ ಎಂದೆಂದಿಗೂ ಶಾಶ್ವತ ಅದನ್ನು ಉಳಿಸಿ ಬೆಳೆಸುವ ಜವಾಬ್ದಾರಿ ನಮ್ಮ ನಿಮ್ಮೆಲ್ಲರದು ಎಂದು ವಿದ್ಯಾರ್ಥಿಗಳಿಗೆ ಕರೆಕೊಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಧನಂಜಯ ಪಾಲಹಳ್ಳಿ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾಲೇಜಿನ ವಿದ್ಯಾರ್ಥಿಗಳು ಪ್ರಾರ್ಥಿಸಿದ ಕಾರ್ಯಕ್ರಮವನ್ನು ಡಾ.ಶಿವಕುಮಾರ್ ಅವರು ಸ್ವಾಗತಿಸಿದರು ಪ್ರೊ.ಮಂಜು.ಜೆ ಅವರು ವಂದಿಸಿ, ಡಾ.ಶ್ರೀನಿವಾಸ ಅವರು ನಿರೂಪಿಸಿದರು.